## ಹಾದಿಗಳೆಲ್ಲಾ ರೋಮಿನತ್ತ

'ಹಾದಿಗಳೆಲ್ಲಾ ರೋಮಿನತ್ತ' (ರಹಮತ್ ತರೀಕೆರೆ, ಫೆ. 24) ಲೇಖನ ಚಿಂತನೆಗಳನ್ನು ಹುಟ್ಟು ಹಾಕಿದೆ. ರೋಮ್ ಸಾಮ್ರಾಜ್ಯದ ರೋಮಾಂಚಕ ಘಟನೆಗಳು ಮೈ ಜುಮ್ ಅನಿಸುತ್ತವೆ. 'ಸಾಮ್ರಾಜ್ಯಗಳು ಅಳಿದು ಹೋದರೂ ಅವುಗಳ ಪಳೆಯುಳಿಕೆಗಳಿಂದ ಪಾಠ ಕಲಿಯಬೇಕು' ಎನ್ನುತ್ತಾರೆ ಲೇಖಕರು. ಅಂದಹಾಗೆ, ಬೃಹತ್ ಆಕೃತಿಗಳನ್ನು ನಿರ್ಮಿಸುವುದು ಎಷ್ಟು ಸರಿ?

—ತಿಮ್ಮರಾಜು ಎಸ್.ಆರ್., ದಾವಣಗೆರೆ

ರೋಮಿನ ಬಗ್ಗೆ ಲೇಖನ ಅದ್ಭುತವಾಗಿ ಮೂಡಿಬಂದಿದೆ. ಹಿಂದಿನ ಕಾಲದಲ್ಲಿ ತಮ್ಮ ಇತಿಹಾಸವನ್ನು ಮುಂದಿನ ಪೀಳಿಗೆಯವರಿಗೆ ತೋರಿಸಲು ನಿರ್ಮಾಣಮಾಡುವ ಇಮಾರತುಗಳು ನಿಜವಾಗಿಯೂ ಮೆಚ್ಚಬೇಕಾದ ವಿಷಯ. ಆದರೆ ಇನ್ನೊಂದು ಪೀಳಿಗೆಯವರು ಅದನ್ನು ಹಾಳುಮಾಡುವಾಗ ಕಟ್ಟುವವರು ಎಷ್ಟು ಶ್ರಮಪಟ್ಟಿರಬಹುದೆಂದು ಯೋಚನೆ ಮಾಡಿದ್ದರೆ ಆ ಇಮಾರತುಗಳೂ ಉಳಿಯುತ್ತಿದ್ದವೇನೋ.

—ಮಾಧವ ಉದ್ಯಾವರ, ಮೈಸೂರು

## ಸಿಂಪ್ಲಿ ಮಾ ಸರಸ್ವತಿ

'ಸಿಂಪ್ಲಿ ಮಾ ಸರಸ್ವತಿ' (ಉಮಾ ಅನಂತ್, ಫೆ. 24) ಲೇಖನ ಚೆನ್ನಾಗಿತ್ತು. ಈ ಶತಮಾನ ಕಂಡ ಅಪ್ರತಿಮ ಗಾಯಕಿ, ಸಿನಿಮಾ ರಂಗದ ಸಂಗೀತ ಸಾಮ್ರಾಜ್ಞಿಯಾಗಿ ಮೆರೆದ, ಭಾರತರತ್ನ ಸಹಿತಹಲವು ಪುರಸ್ಕಾರಗಳನ್ನು ತನ್ನ ಮುಡಿಗೇರಿಸಿಕೊಂಡಿದ್ದ ಲತಾ ಮಂಗೇಶ್ಕರ್ ಸ್ಮರಣೆಗೈದ 'ಸುಧಾ'ಗೆ ಧನ್ಯವಾದಗಳು.

—ಪಿ. ಜಯವಂತ ಪೈ, ಕುಂದಾಪುರ

ವಂದನೆಗಳು 'ಸುಧಾ'. ಮೊದ ಮೊದಲು ನೀ ಇಲ್ಲದ ವಾರ ಮುಂದೆ ಹೋಗುತ್ತಿರಲಿಲ್ಲ. ಟೀವಿ, ಮೊಬೈಲ್ ಬಂದಮೇಲೆ ಮರೆತೇ ಹೋಗಿದ್ದೆ. ಆದ್ರೆ ಮೊನ್ನೆ ಸಂಗೀತ ಸಾಮ್ರಾಜ್ಞಿ, ಭಾರತದ ದಿವ್ಯರತ್ನ ಲತಾ ಮಂಗೇಶ್ಕರ್ ಅಮ್ಮ ತೀರಿಹೋದಾಗ, ನೀನು ಅಮ್ಮನ ಮುಖಪುಟ ಹೊತ್ತು ಬಂದಾಗ ಮತ್ತೆ ಕೊಂಡಿದ್ದೆ. ಆ ಮಹಾತಾಯಿಯ ಬಗ್ಗೆ ಬರೆದು 'ಸುಧಾ' ಶ್ರದ್ಧಾಂಜಲಿ ಅರ್ಪಿಸಿದ್ದಲ್ಲದೆ ತನ್ನ ಸಹೃದಯತೆಯನ್ನು ಮೆರೆದಿದ್ದಾಳೆ.

—ಸಿ. ಮಂಜುನಾಥ

## ಜೇಮ್ಸ್ ವೆಬ್

'ಜೇಮ್ಸ್ ಬಾಂಡ್' (ಡಾ. ಬಿ.ಆರ್. ಗುರುಪ್ರಸಾದ್, ಫೆ. 24) ಲೇಖನ ಅದ್ಭುತವಾಗಿತ್ತು. ಒಮ್ಮೆ ಓದಿದಾಗ ಪೂರ್ತಿ ಮನನವಾಗಲಿಲ್ಲ. ಮತ್ತೊಮ್ಮೆ ಓದಿದಾಗ ವಿವರಗಳು ಮೈ ನವಿರೇಳಿಸಿದವು. ಸಾಮಾನ್ಯ ಜನರಿಗೆ ಅಂತರಿಕ್ಷ ದೂರದರ್ಶಕದ ಬಗ್ಗೆ ಇಷ್ಟು ಚೆನ್ನಾಗಿ ಮಾಹಿತಿ ಕೊಟ್ಟ ಲೇಖಕರಿಗೆ ನಮನಗಳು ಹಾಗೂ ಪ್ರಕಟಿಸಿದ 'ಸುಧಾ'ಗೆ ಧನ್ಯವಾದಗಳು. ಮತ್ತಷ್ಟು ಇಂತಹ ಬರಹಗಳು ಸುಧಾದಲ್ಲಿ ಪ್ರಕಟವಾಗಲಿ.

—ವಸಂತಿ ಪಾರಂಪಳ್ಳಿ, ಬೆಂಗಳೂರು

## ನಿರಂಕುಶಮತಿಗಳಾಗಿ

'ಜಾಣ ಜಾಣೆಯರಿಗೆ ಮತ್ತೆ ನೆನಪಿಸಿ, ಆತ್ಮಶ್ರೀಗಾಗಿ...' (ಚ.ಹ. ರಘುನಾಥ, ಫೆ. 24) ಲೇಖನ ವಿದ್ಯಾರ್ಥಿಗಳಿಗೆ ಮಾರ್ಗದರ್ಶಿಯಾಗಿದೆ. 'ಮತ ಭ್ರಾಂತಿಯನ್ನು ಬಿಟ್ಟು ಮತಿಯ ದೀವಿಗೆಯನ್ನು ಹಿಡಿಯಬೇಕು' ಎಂಬುದು ಇಂದಿನ ಯುವಕ ಯುವತಿಯರ ಅರಿವಿಗೆ ಒಳಗಾಗಲಿ.

—ಜಿ. ಕೃಷ್ಣಪ್ಪ, ಬೆಂಗಳೂರು

## ಎರಡು ಸೂಚನೆಗಳು

'ಸುಧಾ'ದಲ್ಲಿ ಪ್ರಕಟವಾಗುವ 'ಸೆಲೆಬ್ರಿಟಿ' ಅಂಕಣದಲ್ಲಿ, ಸೆಲೆಬ್ರಿಟಿಗಳ ಫೋಟೊ ಕೆಳಗೆ ಅವರ ಹೆಸರನ್ನು ಹಾಕಿದರೆ ಚೆನ್ನಾಗಿರುತ್ತದೆ. 'ಕಿರುಚಿತ್ರ'ದಲ್ಲಿ, ಅದು ಯಾವ ಭಾಷೆಯ ಕಿರುಚಿತ್ರ ಎನ್ನುವುದನ್ನೂ ಹಾಕಿದರೆ ಸಹಾಯವಾಗುತ್ತದೆ.

—ಆಶಾಲತಾ

## ಗುಡ್ಡದ ಜೀವಕ್ಕೆ ಪದ್ಮಶ್ರೀ ಬಾಗಿನ

'ಗುಡ್ಡದ ಜೀವಕ್ಕೆ ಪದ್ಮಶ್ರೀ ಬಾಗಿನ' (ನಾ. ಕಾರಂತ್ ಪೆರಾಜೆ, ಫೆ. 17) ಲೇಖನದಲ್ಲಿ ಮಹಾಲಿಂಗ ನಾಯ್ಕರ ಬದುಕಿನ ಚಿತ್ರಣ ಕಣ್ಣಿಗೆ ಕಟ್ಟುವಂತೆ ಓದುಗರಿಗೆ ವಿವರಿಸಿದ್ದಕ್ಕೆ ಧನ್ಯವಾದಗಳು. ಅವರೊಂದಿಗೇ ಮಾತನಾಡಿದಂತಹ ಅನುಭವವಾಯಿತು.

—ಸುಮಂತ್, ಸಿದ್ದಾಪುರ



## ವಿಜ್ಞಾನ ಸಂಸ್ಕೃತಿ ನಮ್ಮಲ್ಲಿದೆಯೇ?

'ವಿಜ್ಞಾನ ಸಂಸ್ಕೃತಿ ನಮ್ಮಲ್ಲಿದೆಯೇ?' (ಗುರುರಾಜ್ ಎಸ್. ದಾವಣಗೆರೆ, ಫೆ. 24) ಲೇಖನ ಅತ್ಯುತ್ತಮ ಮಾಹಿತಿಗಳನ್ನೊಳಗೊಂಡಿದೆ. ವಿಷಯದ ಆಳ ಮತ್ತು ಪದಬಳಕೆ ಬಹಳ ಚೆನ್ನಾಗಿದೆ. ವೈಜ್ಞಾನಿಕ ಚಿಂತನೆ ಮತ್ತು ಜೀವನವೇ ವಿಜ್ಞಾನದ ಭಾಗವಾಗುವಂತೆ ಮಕ್ಕಳನ್ನು ಬೆಳೆಸಿದರೆ ಆರೋಗ್ಯವಂತ ಸಮಾಜ ಸೃಷ್ಟಿಯಾಗುವುದು.

—ಎಸ್. ಶಿಶುಪಾಲ, ದಾವಣಗೆರೆ

ಬಹುತೇಕರಿಗೆ ಸಾಮಾನ್ಯ ವಿಜ್ಞಾನದ ತಿಳಿವು ಇರುವುದಿಲ್ಲ. ದಿನನಿತ್ಯ ಉಪಯೋಗಿಸುವ ಇಸ್ತ್ರಿ ಪೆಟ್ಟಿಗೆ, ಟೀವಿ ರಿಮೋಟ್, ಲೈಟ್ ಸ್ವಿಚ್, ಮಿಕ್ಸಿ, ಸೈಕಲ್ ಮುಂತಾದವು ಸ್ವಲ್ಪ ಕೆಟ್ಟರೂ ಅದರ ಕುರಿತು ತಿಳಿಯಲು ಪ್ರಯತ್ನಿಸದೆ ರಿಪೇರಿ ಮಾಡುವವರ ಬಳಿ ಹೋಗುತ್ತಾರೆ. ಇಂಥಾ ಸಣ್ಣ ಪುಟ್ಟ ತಂತ್ರಜ್ಞಾನದ ಮಾಹಿತಿಯನ್ನು ಬಾಲ್ಯದಿಂದಲೇ ಬೆಳೆಸಬೇಕು.

—ಪ್ರಿಯಾಂಕಾ, ಬೆಂಗಳೂರು

'ಕೋವಿಡ್ 19' ಸಾಂಕ್ರಾಮಿಕ, ವೈಜ್ಞಾನಿಕ ಮನೋಭಾವವನ್ನು ಒಂದಿಷ್ಟು ಹೆಚ್ಚಿಸಿತು ಎನಿಸಿದರೂ ಜನರ, ವಿದ್ಯಾರ್ಥಿಗಳ ಈ ದಿನಮಾನದ ನಡವಳಿಕೆಗಳು ಇದನ್ನು ಹುಸಿ ಮಾಡಿವೆ. 'ವಿಜ್ಞಾನ ಸಂಸ್ಕೃತಿ' 21ನೇ ಈ ಶತಮಾನದಲ್ಲಿಯೂ ಇನ್ನೂ ಮೂಡಬೇಕಾಗಿದೆ ಎಂಬುದು ವಿಪರ್ಯಾಸವೇ ಸರಿ.

—ಶಶಿಧರ ಎಲೆ, ಬೆಂಗಳೂರು

## ಲವ್ ಸ್ಟೋರಿ

'ಲವ್ ಸ್ಟೋರಿ' (ಪ್ರೇಮಲತಾ ಬಿ., ಫೆ. 17) ಮುಖಪುಟ ಲೇಖನ ತುಂಬಾ ವಿಚಾರಪೂರ್ಣವಾಗಿದೆ. ಪ್ರೀತಿ ಎಂದರೆ ಬರೀ ಗಂಡು ಹೆಣ್ಣಿನ ಪ್ರೀತಿ ಮಾತ್ರ ಎಂದು ಬಹಳ ಜನ ತಿಳಿದುಕೊಂಡಿದ್ದಾರೆ. ಆದರೆ ತಾಯಿ–ಮಕ್ಕಳು, ಅಣ್ಣ–ತಂಗಿ, ಅಕ್ಕ–ತಮ್ಮ, ಹಸು–ಕರುಗಳ ನಡುವಿನ ಬಾಂಧವ್ಯದಲ್ಲಿಯೂ ಪ್ರೀತಿ ಇದೆ.

—ನೀಲಮ್ಮ ಕುಮಾರಪ್ಪ, ರಾಯಚೂರು



## ಒಂಟಿ ದೀಪ

'ಒಂಟಿ ದೀಪ' (ರವಿರಾಜ ಬೈಕಂಪಾಡಿ, ಫೆ. 24) ಕಥೆ ಓದಿ ಆಂಗ್ಲ ಭಾಷೆಯಲ್ಲಿನ ಪತ್ತೇದಾರ ಶೆರ್ಲಾಕ್ ಹೋಮ್ಸ್ ಕಥೆಗಳು ನೆನಪಾದವು. ನಮ್ಮ ಅದ್ಭುತ ಪತ್ತೇದಾರಿ ಕಾದಂಬರಿಕಾರ ಎಂ. ರಾಮಮೂರ್ತಿ ಅವರೂ ಕಣ್ಮುಂದೆ ಬಂದರು.

—ಕುಚ್ಚಣ್ಣ ಶ್ರೀನಿವಾಸನ್

ಕೆಲವು ತಿಂಗಳುಗಳಿಂದ ಪತ್ತೆದಾರಿ ಕಥೆಗಳು ಪ್ರಕಟವಾಗಿರಲಿಲ್ಲ. ರಾತ್ರಿ ಮಲಗುವಾಗ ಒಂಟಿ ದೀಪ ಹಚ್ಚಿಕೊಂಡು 'ಒಂಟಿ ದೀಪ' ಕಥೆ ಓದಿದೆ. ಕಥೆ ಮುಗಿದಿದ್ದೇ ಗೊತ್ತಾಗಲಿಲ್ಲ. ತುಂಬಾ ಖುಷಿ ಕೊಟ್ಟಿತು.

—ದೀಕ್ಷಾ ಗಿರೀಶ, ಮೈಸೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in